# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 284(27) |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12.08.2025 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2 ವರ್ಷದಿಂದ ರಾಜ್ಯದಲ್ಲಿ ಕೃಷಿಯೇತರ ಚಟುವಟಿಕೆಗಳಿಗೆ ಎಷ್ಟು ಎಕರೆ ಭೂ ಬದಲಾವಣೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಕಳೆದ 2 ವರ್ಷದಿಂದ ರಾಜ್ಯದಲ್ಲಿ (BDA, BMRDA ಮತ್ತು BMICAPA ವ್ಯಾಪ್ತಿಯನ್ನು ಹೊರತುಪಡಿಸಿ) ಕೃಷಿಯೇತರ ಚಟುವಟಿಕೆಗಳಿಗೆ 2747.50 ಎಕರೆ ಭೂ ಬದಲಾವಣೆ ಮಾಡಲಾಗಿದೆ.<br>(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ). |
| ಆ) | ಸರ್ಕಾರದ ಕಾರ್ಯದರ್ಶಿಯವರಿಗೆ ಭೂ ಬದಲಾವಣೆ ಮಾಡಲು ಎಷ್ಟು ಎಕರೆವರೆಗೆ ಅಧಿಕಾರವಿದೆ; ಸಚಿವರಿಗೆ ಭೂ ಬದಲಾವಣೆ ಮಾಡಲು ಎಷ್ಟು ಎಕರೆ ಮೇಲ್ಪಟ್ಟಿದ್ದರೆ ಕಡತ ಸಲ್ಲಿಸಲಾಗುತ್ತದೆ; | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-ಎ ರನ್ವಯ ವಿಸ್ತೀರ್ಣದ ಮಿತಿಯಿಲ್ಲದೇ ಭೂ ಉಪಯೋಗ ಬದಲಾವಣೆಯ ಎಲ್ಲಾ ಪ್ರಸ್ತಾವನೆಗಳನ್ನು ಇಲಾಖಾ ಸಚಿವರ ಅನುಮೋದನೆ ಪಡೆದು ಸರ್ಕಾರಿ ಆದೇಶಗಳನ್ನು ಹೊರಡಿಸಲಾಗುತ್ತದೆ. |
| ಇ) | ರಾಜ್ಯದಲ್ಲಿ ನಗರಸಭೆ ಹಾಗೂ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇ-ಖಾತಾ ಹೊಂದಿರುವವರಿಗೆ ಮನೆ ನಿರ್ಮಾಣ ಮಾಡಲು ಪ್ರಾಧಿಕಾರದಿಂದ ಲೈಸೆನ್ಸ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಜಾಗಕ್ಕೆ ಸಂಬಂಧಿಸಿದ ಆಡಳಿತಕ್ಕೆ ನಿಯಮಾನುಸಾರ ಆಸ್ತಿ ಕಂದಾಯ ಪಾವತಿ ಮಾಡುತ್ತಿದ್ದರೂ ಸಹ ಮನೆ ನಿರ್ಮಾಣ ಮಾಡಲು ಲೈಸೆನ್ಸ್ ನೀಡದಿರಲು ಕಾರಣಗಳೇನು; (ವಿವರ ನೀಡುವುದು) | ಬಂದಿದೆ. ಕರ್ನಾಟಕ ಪೌರಸಭೆಗಳ ಅಧಿನಿಯಮ 1964 / ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 ಗೆ ತಿದ್ದುಪಡಿ ತಂದು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ದಿನಾಂಕ:10.09.2024 ರ ಪೂರ್ವದಲ್ಲಿ ರಚಿಸಲಾಗಿರುವ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ಇ-ಖಾತಾ ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯದ ಆಸ್ತಿಗಳಿರುತ್ತವೆ. ಈ ರೀತಿಯ ಸ್ವತ್ತುಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ವ್ಯಾಪ್ತಿಯಿಂದ ಹೊರಗುಳಿದಿರುತ್ತವೆ. ಸದರಿ |
| ಈ) | ಇ-ಖಾತಾ ಹೊಂದಿರುವವರು ಮನೆ ನಿರ್ಮಾಣಕ್ಕೆ ಸ್ಥಳೀಯ ಪ್ರಾಧಿಕಾರದ ವತಿಯಿಂದ ಅನುಮತಿ ನೀಡದೇ ಇರುವ ಕಾರಣ ಬ್ಯಾಂಕ್ ಅಥವಾ ಇನ್ನಿತರ | |

| | | |
|---|---|---|
| | ಸಂಸ್ಥೆಗಳಿಂದ ಮನೆ ನಿರ್ಮಾಣಕ್ಕೆ ಸಾಲ ಮಂಜೂರಾಗದೇ ಮನೆ ನಿರ್ಮಾಣ ಮಾಡಲು ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಆಸ್ತಿಗಳಲ್ಲಿನ ನಿವೇಶನಗಳಿಗೆ ನಗರ ಸ್ಥಳೀಯ ಸಂಸ್ಥೆಗಳಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುತ್ತಿರುವುದಿಲ್ಲ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿ ವಿನ್ಯಾಸ ಅನುಮೋದನೆ ಪಡೆದು ರಚಿಸಲಾಗಿರುವ ಇ-ಖಾತಾ ಹೊಂದಿರುವ ನಿವೇಶನಗಳಿಗೆ ಹಾಗೂ ಗ್ರಾಮಠಾಣಾ ಸ್ವತ್ತುಗಳಿಗೆ ಕಟ್ಟಡ ಪರವಾನಿಗೆ ನೀಡಲಾಗುತ್ತಿದೆ. |

**ಸಂಖ್ಯೆ: ನಅಇ 238 ಬೆಂರೂಪ್ರಾ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು

## ಅನುಬಂಧ
## ಜಿಲ್ಲಾವಾರು ಮಾಹಿತಿ

| ಕ್ರ.ಸಂ. | ಜಿಲ್ಲೆಗಳು | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|
| 1. | ಬಾಗಲಕೋಟೆ | 131.82 |
| 2. | ಬೆಳಗಾವಿ | 73.31 |
| 3. | ಬಳ್ಳಾರಿ | 39.98 |
| 4. | ಬೀದರ್ | 40.12 |
| 5. | ವಿಜಯಪುರ | 26.78 |
| 6. | ಚಿಕ್ಕಮಗಳೂರು | 124.68 |
| 7. | ಚಿತ್ರದುರ್ಗ | 280.73 |
| 8. | ದಾವಣಗೆರೆ | 17.07 |
| 9. | ಗದಗ | 154.90 |
| 10. | ಕಲಬುರಗಿ | 147.92 |
| 11. | ಹಾಸನ | 19.35 |
| 12. | ವಿಜಯನಗರ | 82.49 |
| 13. | ಧಾರವಾಡ | 395.40 |
| 14. | ಕೋಲಾರ | 90.55 |
| 15. | ಮಂಡ್ಯ | 0.075 |
| 16. | ದಕ್ಷಿಣ ಕನ್ನಡ | 44.21 |
| 17. | ಮೈಸೂರು | 361.17 |
| 18. | ರಾಯಚೂರು | 71.57 |
| 19. | ಶಿವಮೊಗ್ಗ | 198.37 |
| 20. | ತುಮಕೂರು | 46.65 |
| 21. | ಉಡುಪಿ | 12.55 |
| 22. | ಉತ್ತರ ಕನ್ನಡ | - |
| 23. | ಕೊಡಗು | 63.59 |
| 24. | ಯಾದಗಿರಿ | 124.88 |
| 25. | ಚಾಮರಾಜನಗರ | - |
| 26. | ಚಿಕ್ಕಬಳ್ಳಾಪುರ | 36.88 |
| 27. | ಹಾವೇರಿ | 154.15 |
| 28. | ಕೊಪ್ಪಳ | 8.27 |
| | ಒಟ್ಟು | 2747.50 ಎಕರೆ |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.

4 NK( E-Ofc) August.2025